# ಪತ್ರಿಕಾ ಪ್ರಕಟಣೆ

ಕರ್ನಾಟಕ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯ ಜಾರಿ, ದಕ್ಷಿಣ ವಲಯ, ಬೆಂಗಳೂರು, ವಿಭಾಗವು "ಜಿಎಸ್‌ಟಿ ನಕಲಿ ಬಿಲ್ಲು ತಯಾರಕರ" ಜಾಲವನ್ನು ಬೇಧಿಸುವಲ್ಲಿ ಯಶಸ್ವಿಯಾಗಿದೆ. ಈ ಜಾಲವು ಮಾನವ ಶಕ್ತಿ ಹಾಗೂ ಕಾರ್ಮಿಕ ಪೂರೈಕೆ ಸೇವಾ ವಲಯದ ಕಂಪನಿಗಳಿಗೆ ನಕಲಿ ಹೂಡುವಳಿ ತೆರಿಗೆ ಜಮೆಯ ವರ್ಗಾವಣೆ ಹಾಗೂ ಕೃತಕ ತೆರಿಗೆದಾಯಕ ವಹಿವಾಟನ್ನು ಸೃಜಿಸುವ ಉದ್ದೇಶದಿಂದ ಕಾರ್ಯಾಚರಣೆ ನಡೆಸಿರುವುದನ್ನು ಪತ್ತೆ ಹಚ್ಚಲಾಗಿದೆ. ಸೇವಾ ವಲಯದಲ್ಲಿನ ನಕಲಿ ಬಿಲ್ಲು ತಯಾರಿಕೆಯ ಜಾಲದ ಕಾರ್ಯಾಚರಣೆಯನ್ನು ಭೇದಿಸಿರುವುದು ಇದೇ ಮೊದಲಾಗಿರುತ್ತದೆ.

ಈ ಜಾಲವು ಕುಟುಂಬ ಸದಸ್ಯರ, ಸಂಬಂಧಿಕರ, ಸ್ನೇಹಿತರ ಹಾಗೂ ಇತರೆ ವ್ಯಕ್ತಿಗಳ ಗುರುತು ದಾಖಲಾತಿಗಳನ್ನು ಉಪಯೋಗಿಸಿಕೊಂಡು ಸುಮಾರು 30ಕ್ಕೂ ಹೆಚ್ಚು ನಕಲಿ ಕಂಪನಿಗಳನ್ನು ಸೃಷ್ಟಿಸಿರುವುದು ಜಾರಿ ವಿಭಾಗದ ತನಿಖೆಯಿಂದ ಬೆಳಕಿಗೆ ಬಂದಿರುತ್ತದೆ. ಸದರಿ ಜಾಲವು ಸುಮಾರು ರೂ. 525 ಕೋಟಿ ನಕಲಿ ವಹಿವಾಟನ್ನು ನಡೆಸಿದ್ದು ಸರ್ಕಾರದ ಬೊಕ್ಕಸಕ್ಕೆ ಸುಮಾರು 90 ಕೋಟಿ ರೂಪಾಯಿಗಳಷ್ಟು ತೆರಿಗೆ ನಷ್ಟವನ್ನು ಉಂಟು ಮಾಡಿರುವುದಾಗಿ ಅಂದಾಜಿಸಲಾಗಿದೆ.

ಈ ಸಂಬಂಧದಲ್ಲಿ ಜಾರಿ ವಿಭಾಗದ ಅಧಿಕಾರಿಗಳು, ಈ ಜಾಲದ ಕೇಂದ್ರ ವ್ಯಕ್ತಿಗಳಾದ ಗುರುಪ್ರಕಾಶ್ ಹೆಚ್ ಎಂ ಮತ್ತು ಮಂಜುನಾಥಯ್ಯ ಹೆಚ್ ಎಂ ಇವರುಗಳನ್ನು ದಿನಾಂಕ 30-08-2023ರ ಮುಂಜಾನೆಯ ಮಸುಕಿನಲ್ಲಿ ಬಂಧಿಸಿರುತ್ತಾರೆ. ಈ ಪ್ರಯುಕ್ತ ಮತ್ತಷ್ಟು ವ್ಯಕ್ತಿಗಳ ಬಂಧನವಾಗುವ ಸಂಭವವಿರುತ್ತದೆ.

ಈ ಕಾರ್ಯಾಚರಣೆಯ ಹಿನ್ನೆಲೆಯಲ್ಲಿ ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆಯು ನಕಲಿ ಬಿಲ್ಲು ತಯಾರಕರ ಮತ್ತು ತೆರಿಗೆ ತಪ್ಪಿಸುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿದೆ. ನಕಲಿ ಬಿಲ್ಲು ತಯಾರಿಕೆ ಹಾಗೂ ತೆರಿಗೆ ತಪ್ಪಿಸುವಿಕೆಯು ಜಿ.ಎಸ್.ಟಿ ಕಾನೂನಿನಡಿ ಶಿಕ್ಷಾರ್ಹ ಅಪರಾಧವಾಗಿದ್ದು, ಬಂಧನ, ಅಭಿಯೋಜನೆ & ಸೆರೆವಾಸ, ದಂಡ, ಜುಲ್ಮಾನೆ ವಿಧಿಸುವಿಕೆ, ಸರಕುಗಳ ಮುಟ್ಟುಗೋಲು, ಸ್ವತ್ತುಗಳ ಮತ್ತು ಬ್ಯಾಂಕ್ ಖಾತೆಗಳ ಮುಟ್ಟುಗೋಲು ಮುಂತಾದ ತೀಕ್ಷ್ಣ ಕಾನೂನು ಕ್ರಮಗಳು ಕೈಗೊಳ್ಳುವುದನ್ನು ಒಳಗೊಂಡಿರುತ್ತದೆ.

(ಸಿ.ಶಿಖಾ, ಭಾ.ಆ.ಸೇ.)
ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ)
ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು